ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 13.11.2025

<u>ಪಾಟೀ ಸವಾಲು ಃ ಪ್ರತಿವಾದಿ **2** ರವರ ಪರ ಶ್ರಿ ಜಿ.ಎಂ.ಪಿ ವಕೀಲರಿಂದ</u>

1. ನನ್ನಿಂದ ಉಗ್ರಾಣ ನಿಗಮದವರು ರಾಗಿಯನ್ನು ಖರೀದಿ ಮಾಡಿರುತ್ತಾರೆ. ರಾಗಿ ಖರೀದಿ ಮಾಡಿದ ಬಗ್ಗೆ ಉಗ್ರಾಣ ನಿಗಮದವರು ನನಗೆ ಸ್ವೀಕೃತಿ ಪತ್ರ ಮತ್ತು ವೋಚರ್ ನೀಡಿರುತ್ತಾರೆ ಎಂದರೆ ಸರಿ. ನನಗೆ ಉಗ್ರಾಣ ನಿಗಮದವರು 63,480/- ರೂಪಾಯಿಗಳನ್ನು ನೀಡಬೇಕಾಗಿತ್ತು. ನನಗೆ ಉಗ್ರಾಣ ನಿಗಮದವರು ಹಣ ನೀಡಬೇಕಾಗಿತ್ತು ಎಂದರೆ ಸರಿ. 2ನೇ ಪ್ರತಿವಾದಿಯು ನಮಗೆ ಹಣ ಕೊಡಬೇಕಾಗಿಲ್ಲ ಎಂದರೆ ಸಾಕ್ಷಿಯು ನನ್ನ ಬಾಬ್ತು ಮೊತ್ತವು ಆಕೆಯ ಖಾತೆಗೆ ಹೋಗಿದೆ ಎಂದು ನುಡಿಯುತ್ತಾರೆ. ನನ್ನ ಬಾಬ್ತು ಮೊತ್ತವು 2ನೇ ಪ್ರತಿವಾದಿಯ ಖಾತೆಗೆ ಜಮಾ ಆಗಿರುವ ಬಗ್ಗೆ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

2. ನಾನು ಕೆ ಆರ್ ಪೇಟೆಯ ಟೌನ್ ಪೋಲೀಸ್ ಠಾಣೆಗೆ ದೂರನ್ನು ಸಹ ನೀಡಿದ್ದೆ ಎಂದರೆ ಸರಿ. ದೂರು ನೀಡಿದ ನಂತರ ಪೋಲೀಸರು ನನ್ನನ್ನು ಕರೆದು ವಿಚಾರಣೆ ಮಾಡಿರುತ್ತಾರೆ ಆದರೆ ಹಣ ವಾಪಸ್ಸು ಬಂದಿರುವುದಿಲ್ಲ. 2ನೇ ಪ್ರತಿವಾದಿಯ ವಿರುದ್ಧ ದೂರು ಸಲ್ಲಿಸಿದ್ದೆನೋ ಇಲ್ಲವೋ ನನಗೆ ನೆನಪಿಲ್ಲ. 2ನೇ ಪ್ರತಿವಾದಿಯು ನನಗೆ ಯಾವುದೇ ಮೊತ್ತವನ್ನು ಕೊಡಬೇಕಾಗಿಲ್ಲ ಅವರಿಗೆ ತೊಂದರೆ ಕೊಡಲು ನಾನು ದೂರು ನೀಡಿದ್ದೆ ಎಂದರೆ ಸರಿಯಲ್ಲ.

3. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಸಂಗತಿಗಳನ್ನು ಓದಿ ತಿಳಿದುಕೊಂಡಿರುತ್ತೇನೆ. 2ನೇ ಪ್ರತಿವಾದಿಗೆ ತೊಂದರೆ ಕೊಡಬೇಕೆಂಬ

ದುರುದ್ದೇಶದಿಂದ ನಾನು ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4. 2ನೇ ಪ್ರತಿವಾದಿಯು ಸಹ ಉಗ್ರಾಣ ನಿಗಮದಲ್ಲಿ ರಾಗಿಯನ್ನು ಇಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಯಾವುದೇ ದಾಖಲೆಗಳು ಇಲ್ಲದೆ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.